ವಿದ್ಯುತ್ ನಿಗಮದ ಅನ್ವೇಷಣಾ ವಿಭಾಗ

2370 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿದ್ಯುತ್ ನಿಗಮದ ಅನ್ವೇಷಣಾ ವಿಭಾಗಕ್ಕೆ ಅನ್ವೇಷಣಾ ಕಾರ್ಯಕ್ಕಾಗಿ ಸರ್ಕಾರವು ಠೇವಣಿಯಾಗಿಟ್ಟ ಹಣಕ್ಕಿಂತ ಎಷ್ಟು ಜಾಸ್ತಿ ಖರ್ಚಾಗಿದೆ?*

ಆ) *ಈ ಬಗ್ಗೆ ಸರ್ಕಾರಕ್ಕೆ ಈ ಜಾಸ್ತಿ ಹಣ ಮರುಪಾವತಿಗೆ ಯಾವಾಗ ಬೇಡಿಕೆ ಸಲ್ಲಿಸಿದೆ, ಈ ಹಣ ಎಷ್ಟು ಸಮಯದಿಂದ ಬಾಕಿ ಇದೆ?*

ಇ) *ಸರ್ಕಾರ ಈ ರೀತಿ ಅನ್ವೇಷಣಾ ವಿಭಾಗದ ಹಣ ಬಾಕಿ ಇಟ್ಟುಕೊಳ್ಳುವುದರಿಂದಾಗಿ ವಿದ್ಯುತ್ ಕೊರತೆ ಅನುಭವಿಸುತ್ತಿರುವ ಈ ಸಂದರ್ಭದಲ್ಲಿ ಅನ್ವೇಷಣಾ ಕೆಲಸಕ್ಕೆ ಧಕ್ಕೆಯಾಗಿ ವಿದ್ಯುತ್ ಉತ್ಪಾದನೆ ಕಾರ್ಯ ಕುಂಠಿತವಾಗುವುದಿಲ್ಲವೆ?*

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ವಿದ್ಯುತ್ ನಿಗಮದ ಅನ್ವೇಷಣಾ ವಿಭಾಗಕ್ಕೆ ಅನ್ವೇಷಣಾ ಕಾರ್ಯಕ್ಕಾಗಿ ಸರ್ಕಾರವು ಠೇವಣಿಯಾಗಿಟ್ಟ ಹಣಕ್ಕಿಂತ ರೂ. 2312.05 ಲಕ್ಷ ಹೆಚ್ಚಾಗಿರುತ್ತದೆ. 31.3.97ರಲ್ಲಿ ಇದ್ದಂತೆ ಮಾಹಿತಿಯನ್ನು ಒಳಗೊಂಡ ವಿವರಗಳನ್ನು ಲಗತ್ತಿಸಲಾಗಿದೆ.

ಆ) ಇದರ ಬಗ್ಗೆ ಸರ್ಕಾರ ದಿನಾಂಕ 12.2.1997ರಲ್ಲಿ ಬೇಡಿಕೆ ಸಲ್ಲಿಸಿದೆ. ಈ ಹಣ 1980-81ರಿಂದ 1996-97ರ ವರೆಗೆನ ಕೂಡಿ ಬಂದ ಹಣವಾಗಿರುತ್ತದೆ.

ಇ) ಬಹುತ್ತರವಾದ ಅನ್ವೇಷಣಾ ಕಾರ್ಯಗಳು ಈಗಾಗಲೇ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಕಾರ್ಯಗತಗೊಳಿಸಿದೆ. ಆದ್ದರಿಂದ ಅನ್ವೇಷಣಾ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಹೇಳುವುದು ಸರಿಯಲ್ಲ. ಇನ್ನು ಯೋಜನೆಗಳಿಗೆ ಸಂಬಂಧಪಟ್ಟ ಅನ್ವೇಷಣೆ ಕಾರ್ಯಗಳನ್ನು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ತನ್ನ ಸ್ವಂತ ಹಣದಿಂದ ಪೂರ್ಣಗೊಳಿಸಬಹುದಾಗಿದೆ.

SCHEDULE - B

Statement showing the details of Expenses on Survey and Investigation works and reimbursement and private parties.

Sl.No.	Year	Expenditure	Reimbursement from Govt.	Balance due to KFC
1.	1980-81	49.05	42.85	6.20
2.	1981-82	81.86	40.00	41.86
3.	1982-83	101.85	70.00	31.85
4.	1983-84	72.26	70.00	2.26
5.	1984-85	118.49	70.00	48.49
6.	1985-86	91.37	64.00	27.37
7.	1986-87	169.91	65.00	104.91
8.	1987-88	134.32	65.00	69.32
9.	1988-89	151.78	70.00	81.78
10.	1989-90	183.27	75.00	108.27
11.	1990-91	234.89	60.00	174.89
12.	1992-93	267.33	75.00	192.33
13.	1993-94	305.86	75.00	233.20
14.	1994-95	362.32	75.00	160.96
15.	1994-95	402.32	75.00	327.32
16.	1995-96	376.25	63.75	202.55
17.	1996-97	498.49	0.00	498.49
Reimbursement from Pvt companies			109.95	
		3477.60	**1165.55**	**2312.05**